3. ಅರ್ಜಿಯನ್ನೊಪ್ಪಿಸುವುದು

ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ ಕ್ಷೇತ್ರ) :— ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ ಗ್ರಾಮದ ಶ್ರೀ ವೈದ್ಯನಾಥೇಶ್ವರ ದೇವಸ್ಥಾನಕ್ಕೆ ಸೇರಿರುವ ಕೆರೆಯಲ್ಲಿ ಹೂಳೆತ್ತುವ ಬಗ್ಗೆ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತಿದ್ದೇವೆ.

ಅಧ್ಯಕ್ಷರು :— ಅರ್ಜಿಯನ್ನು ಒಪ್ಪಿಸಲಾಯಿತು.

4. ಗೈರು ಹಾಜರಿಗೆ ಅನುಮತಿ.

ಅಧ್ಯಕ್ಷರು :— ಶ್ರೀ ಸಿ. ವೆಂಕಟೇಶಪ್ಪನವರು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ.

"ಶ್ರೀ ಸಿ. ವೆಂಕಟೇಶಪ್ಪನವರು ಅನಾರೋಗ್ಯದಿಂದ ದಿ: 10-9-00ರಿಂದ ಆಸ್ಪತ್ರೆಯಲ್ಲಿ ದಾಖಲಾಗಿರುವುದರಿಂದ, ದಿ: 28-10-00ರಿಂದ ದಿ: 17-11-00ದವರೆಗೆ ಸದನಕ್ಕೆ ಗೈರು ಹಾಜರಾಗಲು ಅನುಮತಿ ಕೋರಿದ್ದಾರೆ."

ಮಾನ್ಯ ಸದಸ್ಯರು ಗೈರು ಹಾಜರಾಗಲು ಸಭೆಯು ಸಮ್ಮತಿಸುತ್ತದೆಯೇ?

ಸಭೆಯು ಒಪ್ಪಿಗೆ ಸೂಚಿಸಿತು.

ಅಧ್ಯಕ್ಷರು :— ಗೈರು ಹಾಜರಿಗೆ ಅನುಮತಿ ನೀಡಲಾಗಿದೆ.

5. ಚುನಾವಣಾ ಪ್ರಸ್ತಾವ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ದಿನಾಂಕ 10-11-2000ರಂದು ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಹಾಗೂ ನಡವಳಿಕೆಯ ನಿಯಮಗಳಂತೆ ವಿಧಾನಮಂಡಲದ ಹಾಗೂ ವಿಧಾನ ಸಭೆಯ ವಿವಿಧ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸಲು ಚುನಾವಣಾ ಪ್ರಸ್ತಾವವನ್ನು ಮಂಡಿಸಿದ್ದು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಕೆಳಕಂಡ ಪ್ರಸ್ತಾವನೆಯನ್ನು ಮಂಡಿಸಲು ಅನುಮತಿ ಕೋರುತ್ತಿದ್ದೇನೆ.

"ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳಲ್ಲಿ ಸಮಿತಿಯ ಅಧಿಕಾರಾವಧಿಯ ನಿಯಮಗಳನ್ನು ತಾತ್ಕಾಲಿಕವಾಗಿ ತಡೆಹಿಡಿದು ಹಾಗೂ ಸದರಿ ಸಮಿತಿಗಳ ಅಧಿಕಾರಾವಧಿಯನ್ನು 31ನೇ ಮಾರ್ಚ್2001ರ ತನಕ ವಿಸ್ತರಿಸಲು ಸೂಚಿಸುತ್ತೇನೆ."

ಮಂಡಿಸಲಾಯಿತು.

ಅಧ್ಯಕ್ಷರು :— ಪ್ರಸ್ತಾವ ಈ ರೀತಿ ಇದೆ.

"ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಾವಳಿಗಳಲ್ಲಿ ಸಮಿತಿಯ ಅಧಿಕಾರಾವಧಿಯ ನಿಯಮಗಳನ್ನು ತಾತ್ಕಾಲಿಕವಾಗಿ ತಡೆಹಿಡಿದು ಹಾಗೂ ಸದರಿ ಸಮಿತಿಗಳ ಅಧಿಕಾರಾವಧಿಯನ್ನು 31ನೇ ಮಾರ್ಚ್ 2001ರ ತನಕ ವಿಸ್ತರಿಸುವುದು."

ಪ್ರಸ್ತಾವವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

6. ಅಧ್ಯಕ್ಷರ ಅಪ್ಪಣೆ ಮೇರೆಗೆ

ಹೊಸ ಸದಸ್ಯರನ್ನು ಸಮಿತಿಗಳಿಗೆ ನೇಮಿಸುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೇ ಕೆಲವು ಸದಸ್ಯರನ್ನು ಯಾವುದೇ ಸಮಿತಿಗಳಿಗೆ ಸದಸ್ಯರನ್ನಾಗಿ ನೇಮಿಸಿಲ್ಲ. ಇರುವ ಸಮಿತಿಗಳನ್ನೇ ಮುಂದುವರಿಸಿದರೆ, ಆ ಸದಸ್ಯರಿಗೆ ಯಾವುದೇ ಸಮಿತಿಯಲ್ಲಿಯೂ ಕೆಲಸ ಮಾಡಲು ಇರುವುದಿಲ್ಲ. ಶ್ರೀ ಕಾಗೇರಿಯವರು ಕಾಗವಾಡದಿಂದ ಗೆದ್ದಿದ್ದು, ಅನುಭವಸ್ಥರಿದ್ದು, ಅವರನ್ನು ಯಾವುದಾದರೊಂದು ಸಮಿತಿಗೆ ನೇಮಿಸಬೇಕೆಂದು ತಮಗೆ ಹೇಳಿದ್ದೇನೆ. ಯಾರು ಬೇಡವೆನ್ನುತ್ತಾರೆಯೋ ಅವರನ್ನು ಬಿಟ್ಟು, ಉಳಿದ ಸದಸ್ಯರನ್ನು ಸಮಿತಿಗಳಿಗೆ ನೇಮಿಸಬೇಕೆಂದು ತಮ್ಮಲ್ಲಿ ನನ್ನ ಆಗ್ರಹ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಸದಸ್ಯರ ಜೊತೆ ಸಮಾಲೋಚಿಸಿ ಎಲ್ಲಿ ಅವಕಾಶಗಳನ್ನು ಕಲ್ಪಿಸಿಕೊಡುವುದಕ್ಕೆ ಸಾಧ್ಯವಾಗುತ್ತದೆಯೋ, ನೋಡಿ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್ :— ಅಧ್ಯಕ್ಷರು, ತಾವು, ಚೀಫ್ ವಿಪ್‌ರವರು ಚರ್ಚಿಸಿ ಯಾರ್ಯಾರು ಎಲ್ಲಿ ಉಳಿದುಕೊಳ್ಳುತ್ತಾರೆಯೋ, ಅವರನ್ನು ಅಲ್ಲೇ ಉಳಿಸಿಕೊಂಡು, ಹೊಸದಾಗಿ ಆರಿಸಿ ಬಂದ ಸದಸ್ಯರನ್ನು ಸೇರಿಸಿಕೊಂಡು, ಇದನ್ನು ರೀ-ಷಫಲ್ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ಪ್ರಸ್ತಾವ ತಂದ ಉದ್ದೇಶವಿಷ್ಟೆ, ಮೇಲ್ಮನೆಯ ಸದಸ್ಯರ ಸಮಿತಿಯ ಅವಧಿಯು ಅಕ್ಟೋಬರ್-ನವೆಂಬರ್ ತಿಂಗಳಿಗೆ ಮುಗಿಯುವುದಿಲ್ಲ. ಕೆಳಮನೆಯ ಸದಸ್ಯರ ಸಮಿತಿಯ ಅವಧಿ ಮುಗಿಯುತ್ತದೆ. ಅರ್ಧ ಕಮಿಟಿಯ ಅವಧಿ ಮಾರ್ಚ್‌ವರೆಗೆ, ಇನ್ನರ್ಧ ಕಮಿಟಿಯ ಅವಧಿ ಅಕ್ಟೋಬರ್‌ವರೆಗೆ ಹಂಚಿಕೆಯಾಗುತ್ತದೆ.